













ರಾಯಚೂರಿನ ಪರಿಸರದಲ್ಲಿ ಕಾಣಸಿಗುತ್ತವೆ. ರಾಯಚೂರು ಪರಿಸರವನ್ನು 'ನವಿಲುಧಾಮ' ಎಂದು ಘೋಷಿಸುವಷ್ಟು ಸಂಖ್ಯೆಯಲ್ಲಿ ನವಿಲುಗಳ ಸಂತತಿ ಅಲ್ಲಿದೆ.

ರಾಯಚೂರಿನ ಸುತ್ತಲಿನ ಪ್ರದೇಶಗಳಾದ ಮನ್ಸಲಾಪುರ, ಮಲಿಯಬಾದ್, ಬೋಳಮಾನದೊಡ್ಡಿ, ಮರ್ಚೆಡ್, ಮಂತ್ರಾಲಯ ರಸ್ತೆ, ಚಂದ್ರಬಂಡಾ ರಸ್ತೆ, ಗದ್ವಾಲ್ ರಸ್ತೆ, ರಾಂಪೂರ ಮುಂತಾದ ಪ್ರದೇಶಗಳು ಪಕ್ಷಿಗಳ ಹಾಟ್‌ಸ್ಪಾಟ್ ಆಗಿವೆ. ರಾಯಚೂರಿನ ಯಾವುದೇ ಹೊರವಲಯಕ್ಕೆ ಹೋದರೂ ನವಿಲುಗಳು ನೋಡಲು ಸಿಗುತ್ತವೆ. ಹೊಲ, ಬೆಟ್ಟಗುಡ್ಡಗಳಲ್ಲಿ ಹಿಂಡು ಹಿಂಡಾಗಿ ಕಾಣುತ್ತವೆ. ಕೆಲವೊಮ್ಮೆ ನೂರಾರು ಸಂಖ್ಯೆಯಲ್ಲಿ ಕಾಣಿಸುವ ನವಿಲುಗಳು ಸಹೃದಯರನ್ನು ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತವೆ.

ರಾಯಚೂರಿಗೆ ಅಧಿಕೃತವಾಗಿ ಪಕ್ಷಿಧಾಮದ ಮನ್ನಣೆ ಇಲ್ಲದೆ ಹೋದರೂ, ವಿವಿಧ ಬಗೆಯ ಪಕ್ಷಿಗಳು ವರ್ಷದ ಎಲ್ಲ ಕಾಲದಲ್ಲೂ ಇಲ್ಲಿರುತ್ತವೆ ಮತ್ತು ವಲಸೆ ಪಕ್ಷಿಗಳಿಗೂ ಈ ಪರಿಸರ ಅಚ್ಚುಮೆಚ್ಚಾಗಿದೆ. ರಾಯಚೂರಿನ ಪರಿಸರವನ್ನು ಪಕ್ಷಿಗಳಿಗೆ ಪೂರಕವಾಗಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆದಲ್ಲಿ, ಮತ್ತಷ್ಟು ಹೆಚ್ಚಿನ ಸಂಖ್ಯೆಯ ಪಕ್ಷಿಗಳು ಬಿಸಿಲನಾಡಿನಲ್ಲಿ ನೆಲೆ ಕಂಡುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ.

**ಪ್ರತಿಕ್ರಿಯಿಸಿ: feedback@sudha.co.in**